**Proceedings of the Environmental Public Hearing held on 23.06.2015 at 11.00 AM under the Chairmanship of the Additional Deputy Commissioner & Additional District Magistrate Bangalore Urban District on behalf of Deputy Commissioner & District Magistrate and Chairman of Environmental Public Hearing Committee conducted at Proposed Municipal Solid Waste Processing Facility by BBMP at Sy.No.75, Doddabidarakallu village, Yeshwanthapura hobli, Bangalore in respect of following proposed project.**

| | |
|---|---|
| **Name of the Project Proponent** | **M/s Bruhath Bangalore Mahanagara Palike,**<br>**NR Square, Bangalore** |
| **Proposed location of the Projects:-** | **Proposed Municipal Solid Waste Processing Facility, Sy.No.75, Doddabidarakallu Village, Yeshwanthapura hobli, Bangalore** |
| **Details of Activity** | The proponents have proposed to install Municipal Solid Waste processing facility and composting technology for treatment of biodegradable organic fraction of the waste by setting up a Common Municipal Solid Waste Management Facility of capacity 200 tons per day. The project is proposed in an area of 11 acres. |
| **Officers and Dignitaries Present** | 1. Sri R. Venkatachalapathy, ADC, Bangalore Urban District<br>2. Sri Veerabhadrappa, Joint Commissioner, South Zone, BBMP, Bangalore<br>3. Sri Gopalswamy, Special Tahsildar,<br>4. Sri Naveen BV, Deputy Tahsildar<br>5. Sri Madhusudhan S., Environmental Officer, Bangalore Dasarahalli, KSPCB<br>6. Kum. Maheshwari Kumari Singh, Assistant Environmental Officer, Bangalore Dasarahalli, KSPCB<br>7. Sri N Vijayakumar, EE, BBMP<br>8. Sri Siddaraju, AEE, BBMP, Bangalore<br>9. Sri V Krishna, AEE(P), BBMP, RR Nagar Zone, Bangalore<br>10. Sri Omprakash, Village Accountant, Bagalgunte Circle, Bangalore<br>11. Sri Venkatesha Murthy, KUIDFC<br>12. Sri Karthikeyan, EE, KUIDFC,<br>13. Sri Yogendra, AE, KRIDL, Bangalore<br>14. Sri Ramesh, AEE, KRIDL, Bangalore<br>15. Sri Sathyanarayana, RI, Peenya circle, |

| | |
|---|---|
| | Taluk office, Bangalore North<br>16. Sri Balakrishna, Representative, AECOM, Bangalore |
| **Places of availability of project documents as per EIA notification which was kept open to public** | (a) Office of the Deputy Commissioner, Bengaluru Urban district, Bengaluru<br>(b) Chief Executive Officer, Zilla Panchayath, Bengaluru Urban district, Bengaluru<br>(c) District Industries Centre, Bengaluru Urban district, Bengaluru<br>(d) Office of Joint Commissioner, BBMP, Rajarajeshwarinagar Division, Bangalore<br>(e) Office of the Assistant Executive Engineer, Herohalli Subdivision, BEL Layout, Bangalore<br>(f) Regional Office, Dasarahalli, Karnataka State Pollution Control Board, Urban EcoPark, Peenya 3rd Phase, Bangalore<br>(g) Ministry of Environment & Forest, South Zonal Office, E-3/240, Kendriya Sadan, 4th Floor, E&F wings, 17th main road, 2nd Block, Koramangala, Bangalore-560034<br>(h) Helpdesk, Karnataka State Pollution Control Board, Parisara Bhavana, No.49, Church Street, Bangalore-560001 |

**Brief description of the pollution control measures proposed:**

The waste will be sprayed with inoculums/bio-culture and water to accelerate the digestion process. The bacterial activity starts within two to three days and the temperature of the windrows goes upto 60-70 degrees Celsius. After 28 days of decomposition of waste, the materials will be sieved through trommels of varying sieves for refinement of compost. Non-bio-degradable waste would be recycled and converted to RDF. The RDF bales obtained will be sent to cement factories where it will be used as fuel for boilers. Whatever left from the RDF/Compost, would be sent to other landfill sites where it would be scientifically landfilled. Suitable green belt around the premises would be developed as per MSW Rules and notifications by KSPCB. Transportation of MSW would be carried in closed vehicles to ensure that there is no spillage of waste, leachate enroute. The details of transport vehicles would be

registered in KSPCB as per law. The leachate generated will be treated Leachate Treatment Plant(LTP) using the concept of DTS and DEWATS.

- Sri Madhusudhan S., Environmental Officer, Regional Office, Dasarahalli welcomed the Additional Deputy Commissioner & Chairman of Environmental Public Hearing Committee, Bangalore Urban District, Officers from BBMP and various other Departments, elected representatives & public who participated in the Public Hearing. The list of public who participated in the public hearing is enclosed herewith.
- Sri. Madhusudhan S, Environmental Officer addressed the public hearing and said project needs to obtain prior Environmental Clearance from the Department of Ecology & Environment, Government of Karnataka, as per the Environmental Impact Assessment Notification, 2006 and it is also required to go through Environmental Public Hearing. As per the request letter from project proponent, the Karnataka State Pollution Control Board is conducting Environmental Public Hearing & in this regard, Paper Notification was published in News Paper 'Kannadaprabha' daily & 'Times of India' daily on 23.05.2015. Sri Madhusudhan, Environmental Officer informed gathering that, the Project proponent for the said projects who prepared the feasibility study report will make the technical presentation before the public regarding the proposals in the captioned project and Environmental issues involved & then the interested public can come forward & put-forth their views, comments and objections, if any, before the Public Hearing Committee and all the proceedings of the hearing will be video & audio recorded & submitted to Department of Ecology & Environment, Government of Karnataka and he requested the project consultants to give technical presentation.
- Sri Balakrishna, Project Management Expert, who represented on behalf of AECOM India Pvt. Ltd., Bangalore started the technical presentation and briefed about the outline of the project, introduction of the project, project maps, Land use patterns, process flow chart, total investment of the project, Water and Air Pollution details and their control measures, Greenbelt details, environmental management plan, usefulness of the project. The presentation concluded with the summary of the project.

- The Additional Deputy Commissioner & Chairman of Environmental Public Hearing Committee, Bangalore addressed the public and requested the gathering to raise any kind of queries/ problems associated with the project, if any.

**Representations from general public**

1. **Sri Mallikarjun, Doddabidarakallu** pointed out the problem of fly menace, smell nuisance, borewell water contamination and the diseases that may be caused to the surrounding public arising due to the proposed activity. He requested that basic amenities like water, road need to be provided to the villagers. Sri Madhusudhan, Environmental Officer informed that earlier, the garbage was dumped unscientifically which posed lot of problems to the public. But, now, the garbage will be transported to the facility in closed container vehicles and also the solid waste will be processed in closed sheds and segregated scientifically and odourless technology would be adopted. The Environmental Officer informed that borewell water samples from this location have been analysed and observed that the water is having slightly higher levels of Calcium, Magnesium and this might be due to ground water strata.
2. **Sri Prakash, Doddabidarakallu** informed that there should not be any problem of fly menace, smell nuisance due to the proposed activity. The facility should operate scientifically.
3. **Sri Kumar, Doddabidarakallu** pointed out the vehicles needs to transport the garbage to the MSW facility through NICE road and not through the road that passes through village to avoid dust and odour nuisance in the village.
4. **Sri Armugam, Muneshwaranagar** expressed his concern over odour nuisance due to transport of garbage to the facility. The Environmental Officer informed that slight smell nuisance due to garbage transportation is inevitable. But, segregation of the garbage at source will ensure reduction in odour nuisance and it has to be followed by each and every one to overcome this problem.
5. **Sri Cheluvaraj, Doddabidarakallu** informed that there should not be any problem of smell nuisance due to the proposed activity. The facility should operate scientifically.
6. **Sri Hemanth, Doddabidarakallu** informed that the facility should operate scientifically without causing any problem to the villagers.

* Finally Sri R. Venkatachalapathy, ADC, Bangalore Urban District informed the project proponents that the road existing at present passes through the village where houses are located. If the garbage carrying trucks pass through this road, there will be odour and dust nuisance to the nearby villagers. Hence, project proponents need to provide proper road connectivity to the project location from NICE road so that there shall not be any odour and dust nuisance to the surrounding villagers. He informed that all the grievances/ complaints/objections raised in the public hearing will be addressed before going ahead with the project and he would submit the proceedings to concerned authorities.
* The representations submitted by the public to the ADC during the hearing are enclosed herewith.
* Finally, the public hearing concluded at 1:30 p.m.

**Additional Deputy Commissioner**
**Bangalore Urban District**

30.6.2015

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರು ಸರ್ವೆ ಸಂಖ್ಯೆ 75, ದೊಡ್ಡಬಿದರೆಕಲ್ಲು, ಯಶವಂತಪುರ ಹೋಬಳಿ, ಬೆಂಗಳೂರು ಇಲ್ಲಿ ಉದ್ದೇಶಿಸಿರುವ ಮುನಿಸಿಪಲ್ ಘನತ್ಯಾಜ್ಯ ಸಂಸ್ಕರಣಾ ಘಟಕದ ಸ್ಥಾಪನೆ ಬಗ್ಗೆ ಯೋಜನಾ ಸ್ಥಳದಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಪರವಾಗಿ ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 23.06.2015 ಬೆಳಗ್ಗೆ 11:00 ಗಂಟೆಗೆ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡಾವಳಿಗಳು

| | |
|---|---|
| ಕಂಪನಿಯ ಹೆಸರು ಮತ್ತು ವಿಳಾಸ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,<br>ಎನ್.ಆರ್. ಚೌಕ, ಬೆಂಗಳೂರು |
| ಉದ್ದೇಶಿತ ಯೋಜನೆಯ ಸ್ಥಳ | ಸರ್ವೆ ಸಂಖ್ಯೆ 75, ದೊಡ್ಡಬಿದರೆಕಲ್ಲು, ಯಶವಂತಪುರ ಹೋಬಳಿ, ಬೆಂಗಳೂರು |
| ಯೋಜನೆಯ ಕಾರ್ಯಚಟುವಟಿಕೆ | 200 ಟಿಪಿಡಿ ಸಾಮಾನ್ಯ ಮುನಿಸಿಪಲ್ ಘನತ್ಯಾಜ್ಯ ನಿರ್ವಹಣಾ ಘಟಕವನ್ನು ಸರ್ವೆ ಸಂಖ್ಯೆ 75, ದೊಡ್ಡಬಿದರೆಕಲ್ಲು, ಯಶವಂತಪುರ ಹೋಬಳಿ, ಬೆಂಗಳೂರು ಇಲ್ಲಿ ಸ್ಥಾಪಿಸಲು ಉದ್ದೇಶಿಸಿರುತ್ತಾರೆ. |
| ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು | 1) ಶ್ರೀ ಆರ್. ವೆಂಕಟಾಚಲಪತಿ, ಕೆಎಎಸ್, ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ<br>2) ಶ್ರೀ ವೀರಭದ್ರಪ್ಪ, ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯ, ಬಿಬಿಎಂಪಿ, ಬೆಂಗಳೂರು<br>3) ಶ್ರೀ ಗೋಪಾಲಸ್ವಾಮಿ, ವಿಶೇಷ ತಹಸೀಲ್ದಾರ್<br>4) ಶ್ರೀ ನವೀನ್ ಬಿವಿ, ಉಪ ತಹಸೀಲ್ದಾರ್<br>5) ಶ್ರೀ ಮಧುಸೂಧನ್ ಎಸ್., ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ದಾಸರಹಳ್ಳಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>6) ಕು॥ ಮಹೇಶ್ವರಿ ಕುಮಾರಿ ಸಿಂಗ್, ಸಹಾಯಕ ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ದಾಸರಹಳ್ಳಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>7) ಶ್ರೀ ಎನ್.ವಿಜಯಕುಮಾರ್, ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ<br>8) ಶ್ರೀ ಸಿದ್ಧರಾಜು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ<br>9) ಶ್ರೀ ವಿ. ಕೃಷ್ಣ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ<br>10) ಶ್ರೀ ಓಂಪ್ರಕಾಶ್, ಗ್ರಾಮ ಲೆಕ್ಕಿಗ, ಬಗಲಗುಂಟೆ ಸರ್ಕಲ್, ಬೆಂಗಳೂರು<br>11) ಶ್ರೀ ವೆಂಕಟೇಶ ಮೂರ್ತಿ, ಕೆಯುಐಡಿಎಫ್‌ಸಿ, ಬೆಂಗಳೂರು<br>12) ಶ್ರೀ ಕಾರ್ತಿಕೇಯನ್, ಕಾರ್ಯಪಾಲಕ ಅಭಿಯಂತರರು, ಕೆಯುಐಡಿಎಫ್‌ಸಿ, ಬೆಂಗಳೂರು<br>13) ಶ್ರೀ ಯೋಗೇಂದ್ರ, ಸಹಾಯಕ ಅಭಿಯಂತರರು, ಕೆಆರ್‌ಐಡಿಎಲ್, ಬೆಂಗಳೂರು<br>14) ಶ್ರೀ ರಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಆರ್‌ಐಡಿಎಲ್, ಬೆಂಗಳೂರು<br>15) ಶ್ರೀ ಸತ್ಯನಾರಾಯಣ, ಕಂದಾಯ ನಿರೀಕ್ಷಕರು, ಪೀಣ್ಯ ವೃತ್ತ, ತಾಲ್ಲೂಕು ಕಛೇರಿ, ಬೆಂಗಳೂರು ಉತ್ತರ<br>16) ಶ್ರೀ ಬಾಲಕೃಷ್ಣ, ಪ್ರತಿನಿಧಿ, AECOM, ಬೆಂಗಳೂರು |
| ಯೋಜನಾ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗಾಗಿ ಇಡುವ ಸ್ಥಳ | 1) ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ<br>2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ<br>3) ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆ<br>4) ಜಂಟಿ ಆಯುಕ್ತರ ಕಛೇರಿ, ರಾಜರಾಜೇಶ್ವರಿನಗರ ವಲಯ, ಬೆಂಗಳೂರು<br>5) ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪವಿಭಾಗ, ಬಿಇಎಲ್ ಲೇಔಟ್, ಬೆಂಗಳೂರು<br>6) ಪ್ರಾದೇಶಿಕ ಕಛೇರಿ, ಪ್ರಾದೇಶಿಕ ಕಛೇರಿ, ದಾಸರಹಳ್ಳಿ, ಅರ್ಬನ್ ಎಕೋ |

| | |
|---|---|
| | ಪಾರ್ಕ್, 3ನೇ ಹಂತ, ಪೀಣ್ಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>7) ಅರಣ್ಯ ಮತ್ತು ಪರಿಸರ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, E-3/240, Kendriya Sadan, 4th Floor, E&F wings, 17th main road, 2nd Block, Koramangala, Bangalore-560034<br>8) ಸಹಾಯ ಮೇಜು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಭವನ, ಸಂ.49, ಚರ್ಚ್ ರಸ್ತೆ, ಬೆಂಗಳೂರು-560001 |
| ಮಾಲಿನ್ಯ ನಿಯಂತ್ರಣಕ್ಕಾಗಿ ಕೈಗೊಂಡ ಕ್ರಮಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ:<br><br>ಜೈವಿಕ ತ್ಯಾಜ್ಯವನ್ನು ವಿಂಡ್ರೋ ವಿಧಾನದಲ್ಲಿ ಗೊಬ್ಬರವನ್ನಾಗಿ ಮಾಡಲಾಗುತ್ತದೆ. ತಯಾರಾದ ಗೊಬ್ಬರವನ್ನು ಕೆಸಿಡಿಸಿಗೆ ಮಾರಾಟ ಮಾಡಲಾಗುತ್ತದೆ. ಮರುಬಳಸುವ ಅಜೈವಿಕ ತ್ಯಾಜ್ಯವನ್ನು ಆರ್‌ಡಿಎಫ್ ಆಗಿ ಪರಿವರ್ತಿಸಲಾಗುವುದು. ಆರ್‌ಡಿಎಫ್/ಗೊಬ್ಬರವನ್ನಾಗಿ ಪರಿವರ್ತಿಸಲಾಗದ ತ್ಯಾಜ್ಯವನ್ನು ಸ್ಥಳದಲ್ಲೇ ವೈಜ್ಞಾನಿಕವಾಗಿ ನೆಲಭರ್ತಿ ಮಾಡಲಾಗುವುದು. ಯಾವುದೇ ಪರಿಸ್ಥಿತಿಯಲ್ಲೂ ಕೂಡ ಘಟಕದ ಆವರಣದಲ್ಲಿ ನೆಲಭರ್ತಿ ಚಟುವಟಿಕೆ ನಡೆಸುವುದಿಲ್ಲ. ಘನತ್ಯಾಜ್ಯ ನಿಯಮ ಮತ್ತು ಮಂಡಳಿಯ ನಿರ್ದೇಶನದಂತೆ ಹಸಿರು ಪಟ್ಟಿ ಅಭಿವೃದ್ಧಿ ಮಾಡಲಾಗುತ್ತದೆ. ಸಾಗಣೆ ವೇಳೆಯಲ್ಲಿ ಕ್ಷಾರ ಸೋರುವಿಕೆಯನ್ನು ತಡೆಗಟ್ಟಲು ಮುಚ್ಚಿರುವ ವಾಹನಗಳಲ್ಲೇ ಸಾಗಿಸಲಾಗುತ್ತದೆ. ನಿಯಮಗಳ ಪ್ರಕಾರ ಘನತ್ಯಾಜ್ಯ ಸಾರಿಗೆ ವಾಹನಗಳ ವಿವರಗಳನ್ನು ಕಾನೂನಿನ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ದಾಖಲಿಸಲಾಗುವುದು. ಕ್ಷಾರ ಸೃಷ್ಟಿಯಾಗಿರುವುದನ್ನು ಡಿಟಿಎಸ್ ಮತ್ತು ಡಿವ್ಯಾಟ್ಸ್ ಸಂಸ್ಕರಣಾ ವಿಧಾನಗಳಲ್ಲಿ ಸಂಸ್ಕರಿಸಲಾಗುವುದು. | |

- ಶ್ರೀ ಮಧುಸೂಧನ್ ಎಸ್., ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ದಾಸರಹಳ್ಳಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರು ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಆಗಮಿಸಿದ ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬಿಬಿಎಂಪಿ ಹಾಗೂ ಇನ್ನಿತರ ಇಲಾಖಾ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಹಾಗೂ ಸಾರ್ವಜನಿಕರನ್ನು ಸ್ವಾಗತಿಸಿದರು. ಸಭೆಗೆ ಆಗಮಿಸಿದ ಸಾರ್ವಜನಿಕರ ವಿವರಗಳನ್ನು ಲಗತ್ತಿಸಿದೆ.
- ಶ್ರೀ ಮಧುಸೂಧನ್ ಎಸ್., ಪರಿಸರ ಅಧಿಕಾರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಪರಿಸರ ಆಘಾತ ಅಧಿಸೂಚನೆ, 14-09-2006ರ ಪ್ರಕಾರ ಸದರಿ ಯೋಜನೆಯು ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರ ಇವರಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ–ಸಭೆಯನ್ನು ನಡೆಸಬೇಕಾಗಿರುತ್ತದೆ. ಯೋಜನಾದಾರರ ವಿಜ್ಞಾಪನೆಯಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ಆಯೋಜಿಸಿದೆ ಹಾಗೂ ಈ ಸಂಬಂಧ, ಕನ್ನಡಪ್ರಭ ಹಾಗೂ ಟೈಮ್ಸ್ ಆಫ್ ಇಂಡಿಯಾ ದಿನಪತ್ರಿಕೆಗಳಲ್ಲಿ ದಿನಾಂಕ 23.05.2015ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿದೆ. ಶ್ರೀ ಮಧುಸೂಧನ್, ಪರಿಸರ ಅಧಿಕಾರಿಗಳು ಮಾತನಾಡುತ್ತಾ ಸದರಿ ಯೋಜನೆಗಾಗಿ ಅಧ್ಯಯನ ವರದಿಯನ್ನು ತಯಾರಿಸಿದ ಯೋಜನಾದಾರರು ನೆರೆದ ಸಾರ್ವಜನಿಕರ ಸಮ್ಮುಖದಲ್ಲಿ ತಾಂತ್ರಿಕ ವಿವರಗಳು, ಪರಿಸರ ಸಂಬಂಧಿ ವಿಷಯಗಳನ್ನು ಪ್ರಸ್ತುತಪಡಿಸುವುದಾಗಿ ತಿಳಿಸಿ ಆಸಕ್ತ ಸಾರ್ವಜನಿಕರು ಸಭೆಯಲ್ಲಿ ತಮ್ಮ ಅನಿಸಿಕೆ, ಅಭಿಪ್ರಾಯಗಳು ಹಾಗೂ ಆಕ್ಷೇಪಣೆಗಳನ್ನು ತಿಳಿಸಬಹುದಾಗಿದೆ ತಿಳಿಸಿದರು. ಸಭೆಯಲ್ಲಿ

ನಡೆಯುವ ಎಲ್ಲಾ ಕಾರ್ಯ ಕಲಾಪಗಳನ್ನು ವಿಡಿಯೋ ಹಾಗೂ ಆಡಿಯೋ ರೆಕಾರ್ಡಿಂಗ್ ಮಾಡಿ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಸಲ್ಲಿಸುವುದಾಗಿ ತಿಳಿಸಿ, ಯೋಜನಾದಾರರಿಗೆ ತಾಂತ್ರಿಕ ವರದಿಯನ್ನು ಪ್ರಸ್ತುತಪಡಿಸುವಂತೆ ತಿಳಿಸಿದರು.

- ಶ್ರೀ ಬಾಲಕೃಷ್ಣ, ಯೋಜನಾ ನಿರ್ವಹಣಾ ಪರಿಣಿತರು, AECOM India Pvt. Ltd., ಇವರು ತಾಂತ್ರಿಕ ಪ್ರಸ್ತುತಿಯನ್ನು ಪ್ರಾರಂಭಿಸಿ ಯೋಜನೆಯ ರೂಪುರೇಷೆಗಳು, ಯೋಜನೆಯ ಬಗ್ಗೆ ಪರಿವಿಡಿ, ಯೋಜನಾ ನಕ್ಷೆ, ಭೂ ಬಳಕೆ ವಿಧಾನಗಳು, ಯೋಜನಾ ವೆಚ್ಚ, ಜಲ ಹಾಗೂ ವಾಯು ಮಾಲಿನ್ಯ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳು, ಹಸಿರು ಪಟ್ಟಿ ವಿವರಗಳು, ಪರಿಸರ ನಿರ್ವಹಣಾ ಯೋಜನೆ, ಯೋಜನೆ ಉಪಯುಕ್ತತೆ ಇವುಗಳ ಬಗ್ಗೆ ತಿಳಿಸಿದರು. ಪ್ರಸ್ತುತಿಯು ಯೋಜನೆಯ ಸಾರಾಂಶದೊಂದಿಗೆ ಮುಕ್ತಾಯವಾಯಿತು.
- ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿ ತಮ್ಮ ಅನಿಸಿಕೆ, ಅಭಿಪ್ರಾಯಗಳು ಹಾಗೂ ಆಕ್ಷೇಪಣೆ/ಅಹವಾಲುಗಳನ್ನು ತಿಳಿಸಬಹುದಾಗಿದೆ ತಿಳಿಸಿದರು.

ಸಾರ್ವಜನಿಕರ ಅಹವಾಲುಗಳು

- **ಶ್ರೀ ಮಲ್ಲಿಕಾರ್ಜುನ್, ದೊಡ್ಡಬಿದರೆಕಲ್ಲು** ಇವರು ಮಾತನಾಡುತ್ತಾ ಉದ್ದೇಶಿತ ಘಟಕದ ಕಾರ್ಯಾಚರಣೆಯಿಂದ ಸುತ್ತಲಿನ ಸಾರ್ವಜನಿಕರಿಗೆ ನೊಣಗಳ/ಸೊಳ್ಳೆಗಳ ಕಾಟ, ದುರ್ವಾಸನೆ, ಅಂತರ್ಜಲ ಮಾಲಿನ್ಯ ಹಾಗೂ ರೋಗ ರುಜಿನಗಳು ಉಂಟಾಗುವುದೆಂದು ತಿಳಿಸಿದರು. ಗ್ರಾಮಸ್ಥರಿಗೆ ಮೂಲಭೂತ ಸೌಕರ್ಯಗಳಾದ ನೀರು, ರಸ್ತೆಗಳನ್ನು ಒದಗಿಸಬೇಕೆಂದು ತಿಳಿಸಿದರು. ಶ್ರೀ ಮಧುಸೂಧನ್, ಪರಿಸರ ಅಧಿಕಾರಿಗಳು ಉತ್ತರಿಸುತ್ತಾ, ಈ ಹಿಂದೆ, ತ್ಯಾಜ್ಯವನ್ನು ಅವೈಜ್ಞಾನಿಕವಾಗಿ ಸುರಿಯುತ್ತಿದ್ದರಿಂದ ಸಾರ್ವಜನಿಕರಿಗೆ ಅನೇಕ ಸಮಸ್ಯೆಗಳು ಉಂಟಾಗುತ್ತಿತ್ತು. ಆದರೆ, ಈಗ ತ್ಯಾಜ್ಯವನ್ನು ಮುಚ್ಚಿದ ಲಾರಿಗಳಲ್ಲಿ ಸಾಗಿಸಿ ತ್ಯಾಜ್ಯವನ್ನು ಮುಚ್ಚಿದ ಷೆಡ್‌ಗಳಲ್ಲಿ ವಿವಿಧ ತ್ಯಾಜ್ಯಗಳನ್ನಾಗಿ ಬೇರ್ಪಡಿಸಿ ವೈಜ್ಞಾನಿಕವಾಗಿ ಸಂಸ್ಕರಣೆ ಮಾಡುತ್ತಾ ದುರ್ವಾಸನೆ ಕಡಿಮೆ ಮಾಡಲು ತಂತ್ರಜ್ಞಾನವನ್ನು ಅಳವಡಿಸಲಾಗುವುದು ಎಂದು ತಿಳಿಸಿದರು. ಪರಿಸರ ಅಧಿಕಾರಿಗಳು ಸದರಿ ಪ್ರದೇಶದಲ್ಲಿನ ಕೊಳವೆಬಾವಿಗಳ ನೀರಿನ ಮಾದರಿಗಳನ್ನು ವಿಶ್ಲೇಷಿಸಿದ್ದು, ಅವುಗಳಲ್ಲಿ ಮೆಗ್ನೀಷಿಯಂ, ಕ್ಯಾಲ್ಷಿಯಂ ಪ್ರಮಾಣ ಹೆಚ್ಚಿದ್ದು ಇದು ಅಂತರ್ಜಲದ ಮಟ್ಟದ ಪ್ರಭಾವವಾಗಿರುತ್ತದೆ ಎಂದು ತಿಳಿಸಿದರು.
- **ಶ್ರೀ ಪ್ರಕಾಶ್ ದೊಡ್ಡಬಿದರೆಕಲ್ಲು** ಇವರು ಮಾತನಾಡುತ್ತಾ ಉದ್ದೇಶಿತ ಘಟಕದ ಕಾರ್ಯಾಚರಣೆಯಿಂದ ಸುತ್ತಲಿನ ಸಾರ್ವಜನಿಕರಿಗೆ ನೊಣಗಳ/ಸೊಳ್ಳೆಗಳ ಕಾಟ, ದುರ್ವಾಸನೆ, ಮುಂತಾದ ತೊಂದರೆಗಳಾಗಬಾರದೆಂದು ತಿಳಿಸಿದರು. ಈ ಯೋಜನೆಯು ವೈಜ್ಞಾನಿಕವಾಗಿ ನಡೆಸಿಕೊಂಡು ಹೋಗಬೇಕು ಎಂದು ತಿಳಿಸಿದರು.
- **ಶ್ರೀ ಕುಮಾರ್, ದೊಡ್ಡಬಿದರೆಕಲ್ಲು** ಇವರು ಮಾತನಾಡುತ್ತಾ ಊರಿನಲ್ಲಿ ಧೂಳು ಮತ್ತು ದುರ್ವಾಸನೆ ತಡೆಯಲು ಘನತ್ಯಾಜ್ಯ ಸಾಗಿಸುವ ವಾಹನಗಳು ಊರಿನ ಒಳಗಿನ ರಸ್ತೆ ಮುಲಕ ಬರದೆ ನೈಸ್ ರಸ್ತೆ ಮೂಲಕ ಸಾಗಿ ಬರಬೇಕೆಂದು ತಿಳಿಸಿದರು.

- **ಶ್ರೀ ಆರ್ಮುಗಂ, ಮುನೇಶ್ವರನಗರ** ಇವರು ಮಾತನಾಡುತ್ತಾ ತ್ಯಾಜ್ಯ ಸಾಗಣೆಯಿಂದ ಉಂಟಾಗುವ ದುರ್ವಾಸನೆಯ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದರು. ಪರಿಸರ ಅಧಿಕಾರಿಗಳು ಮಾತನಾಡಿ ತ್ಯಾಜ್ಯ ವಾಹನ ಸಾಗಣೆಯಿಂದ ಸ್ವಲ್ಪ ದುರ್ವಾಸನೆ ಉಂಟಾಗುವುದು ಸಹಜ, ಆದರೆ, ಈ ಸಮಸ್ಯೆಯ ಪ್ರಮಾಣವನ್ನು ಕಡಿಮೆಗೊಳಿಸುವುದಕ್ಕಾಗಿ ಪ್ರತಿಯೊಬ್ಬರೂ ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಣೆ ಮಾಡಬೇಕಾಗಿದೆ ಎಂದರು.
- **ಶ್ರೀ ಚೆಲುವರಾಜ್, ದೊಡ್ಡಬಿದರಕಲ್ಲು** ಇವರು ಮಾತನಾಡುತ್ತಾ ಉದ್ದೇಶಿತ ಘಟಕದ ಕಾರ್ಯಾಚರಣೆಯಿಂದ ಸುತ್ತಲಿನ ಸಾರ್ವಜನಿಕರಿಗೆ ನೊಣಗಳ/ಸೊಳ್ಳೆಗಳ ಕಾಟ, ದುರ್ವಾಸನೆ, ಮುಂತಾದ ತೊಂದರೆಗಳಿರಬಾರದೆಂದು ತಿಳಿಸಿದರು. ಈ ಯೋಜನೆಯು ವೈಜ್ಞಾನಿಕವಾಗಿ ನಡೆಸಿಕೊಂಡು ಹೋಗಬೇಕು ಎಂದು ತಿಳಿಸಿದರು.
- **ಶ್ರೀ ಹೇಮಂತ್, ದೊಡ್ಡಬಿದರಕಲ್ಲು** ಈ ಯೋಜನೆಯು ಗ್ರಾಮಸ್ಥರಿಗೆ ತೊಂದರೆಯಾಗದಂತೆ ವೈಜ್ಞಾನಿಕವಾಗಿ ನಡೆಸಿಕೊಂಡು ಹೋಗಬೇಕು ಎಂದು ತಿಳಿಸಿದರು.

- ಕೊನೆಯಲ್ಲಿ ಶ್ರೀ ಆರ್.ವೆಂಕಟಾಚಲಪತಿ, ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಇವರು ಸಭೆಯನ್ನು ಹಾಗೂ ಯೋಜನಾದಾರರನ್ನು ಉದ್ದೇಶಿಸಿ ಮಾತನಾಡುತ್ತಾ, ಪ್ರಸ್ತುತ ಇರುವ ರಸ್ತೆಯು ಮನೆಗಳು ಇರುವ ಗ್ರಾಮದ ಮೂಲಕ ಹಾದುಹೋಗುತ್ತದೆ. ಈ ಮಾರ್ಗದಲ್ಲಿ ತ್ಯಾಜ್ಯವನ್ನು ಸಾಗಣೆ ಮಾಡಿದರೆ ಸುತ್ತಲಿನ ಗ್ರಾಮಸ್ಥರಿಗೆ ದುರ್ವಾಸನೆ ಹಾಗೂ ಧೂಳಿನ ತೊಂದರೆ ಉಂಟಾಗುವುದು. ಆದುದರಿಂದ, ಸನಿಹದ ಗ್ರಾಮಸ್ಥರಿಗೆ ಯಾವುದೇ ತರಹದ ತೊಂದರೆ ಉಂಟಾಗದ ರೀತಿಯಲ್ಲಿ ಯೋಜನೆ ಪ್ರದೇಶದ ಹತ್ತಿರವಿರುವ ನೈಸ್ ರಸ್ತೆಯ ಮೂಲಕ ಯೋಜನಾ ಪ್ರದೇಶಕ್ಕೆ ರಸ್ತೆಯನ್ನು ಕಲ್ಪಿಸಬೇಕೆಂದು ತಿಳಿಸಿದರು. ಹಾಗೂ ಆಲಿಕೆ ಸಭೆಯಲ್ಲಿ ಬಂದಿರುವಂತಹ ಅಹವಾಲುಗಳು/ ದೂರುಗಳು/ ಆಕ್ಷೇಪಣೆಗಳನ್ನು ಪರಿಗಣಿಸಿ ಸೂಕ್ತಕ್ರಮ ಕೈಗೊಳ್ಳಲಾಗುವುದು ಹಾಗೂ ಈ ಸಭೆಯ ನಡಾವಳಿಗಳನ್ನು ತಯಾರಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಸೂಕ್ತ ಪರಿಶೀಲನೆಗೆ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು.
- ಸಭೆಯ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಿಗೆ ಸಾರ್ವಜನಿಕರು ಸಲ್ಲಿಸಿದ ಮನವಿಗಳನ್ನು ಲಗತ್ತಿಸಿದೆ.
- ಸಭೆಯನ್ನು ಅಪರಾಹ್ನ 1:30ಕ್ಕೆ ಮುಕ್ತಾಯಗೊಳಿಸಲಾಯಿತು.

**ಅಪರ ಜಿಲ್ಲಾಧಿಕಾರಿಗಳು,**
**ಬೆಂಗಳೂರು ನಗರ ಜಿಲ್ಲೆ**

30.6.2015